ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ., ರವರ ನ್ಯಾಯಾಲಯದಲ್ಲಿ, ತರೀಕೆರೆ.
ಸಿಸಿ ನಂಬರ್.14/2023

| | | |
|---|---|---|
| ಸಾಕ್ಷಿಯ ಹೆಸರು | : ಡಾ.ಮಂಜುನಾಥ್.ಬಿ.ಎಸ್. | ಸಿ.ಡಬ್ಲ್ಯು 8 |
| ತಂದೆಯ ಹೆಸರು | : ಶ್ರೀ ಸಿದ್ದರಾಮಪ್ಪ.ಬಿ.ಎಸ್ | ಪಿ.ಡಬ್ಲ್ಯು 7 |
| ವಯಸ್ಸು | : 44 ವರ್ಷ | |
| ಉದ್ಯೋಗ | : ವೈದ್ಯ ವೃತ್ತಿ | |
| ವಾಸ ಸ್ಥಳ | : ತರೀಕೆರೆ | |

ದಿನಾಂಕಃ20.11.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು:

ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ. ರವರಿಂದಃ-

ನಾನು ಕಳೆದ 9 ವರ್ಷಗಳಿಂದ ತರೀಕೆರೆಯಲ್ಲಿ ಮಕ್ಕಳ ತಜ್ಞ ಎಂದು ಕೆಲಸ ಮಾಡುತ್ತಿದ್ದೇನೆ.

ದಿನಾಂಕ 19.08.2022 ರಂದು ನಾನು ಕರ್ತವ್ಯ ನಿರತನಾಗಿದ್ದಾಗ ಬೆಳಗ್ಗೆ 11 ಗಂಟೆಗೆ ಚಾಸ-1 ರವರು ಹಲ್ಲೆಯ ಹಿನ್ನಲೆಯಲ್ಲಿ ಆಸ್ಪತ್ರೆಗೆ ಭೇಟಿ ಕೊಟ್ಟಿದ್ದರು. ಅವರನ್ನು ನಾನು ಪರೀಕ್ಷಿಸಿ ನೋಡಲಾಗಿ ಅವರ ಹಣೆಯ ಎಡಭಾಗದಲ್ಲಿ ತೆರದ ರಕ್ತದ ಗಾಯ ಆಗಿತ್ತು. ಅದರ ಅಳತೆ 5X2X0.5 ಇದ್ದು ಗಾಯ ಹೊಸ ಗಾಯವಾಗಿತ್ತು. ಸದರಿ ವ್ಯಕ್ತಿಗೆ ಸೂಕ್ತ ಚಿಕಿತ್ಸೆಯನ್ನು ನೀಡಿ ಆ ಬಗ್ಗೆ ನಾನು ಗಾಯದ ಪ್ರಮಾಣ ಪತ್ರವನ್ನು ಕೂಡ ಕೊಟ್ಟಿದ್ದೇನೆ. ಗಾಯದ ಪ್ರಮಾಣ ಪತ್ರವನ್ನು ನಿಪಿ-6 ಎಂದು, ಸಾಕ್ಷಿಯ ಸಹಿಯನ್ನು ನಿಪಿ-6(ಎ) ಎಂದು ಗುರುತಿಸಲಾಯಿತು. ಚಾಸ-1 ಇವರಿಗೆ ಆದ ಗಾಯವು ಸಾಧಾರಣ ಸ್ವರೂಪದ ಗಾಯ ಆಗಿರುತ್ತದೆ.

ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ

ಸಾಮಾನ್ಯವಾಗಿ ನಡೆಯುವಾಗ ಅಥವಾ ಓಡುವಾಗಿ ಆಯ ತಪ್ಪಿ ಗಟ್ಟಿಯಾದ ವಸ್ತುವಿನ ಮೇಲೆ ಬಿದ್ದಾಗ ಈ ತರಹದ ಗಾಯಗಳು ಆಗುವ ಸಾಧ್ಯತೆ ಇದೆ ಎಂದರೆ ಸರಿ.

ಮರುವಿಚಾರಣೆ : ಇಲ್ಲಃ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಎ ಒ

ಸಹಿ/-

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ., ರವರ ನ್ಯಾಯಾಲಯ, ತರೀಕೆರೆ.